ಸೆಲೆಬ್ರಿಟಿ

■ ಹನಿ

## ಮತ್ತೊಬ್ಬ ಸಿಇಒ

ಫಿನ್‌ಲ್ಯಾಂಡ್ ಮೂಲದ ನೋಕಿಯಾ ಕಂಪೆನಿಯ ಸಿಇಒ ಆಗಿ ಮಂಗಳೂರು ಮೂಲದ ವಿದ್ಯಾರ್ಥಿ ರಾಜೀವ್ ಸೂರಿ ಆಯ್ಕೆಯಾಗಿದ್ದು ಕನ್ನಡಿಗರಿಗೆ ಬೆನ್ನು ತಟ್ಟಿಕೊಳ್ಳಲು ಇನ್ನೊಂದು ಅವಕಾಶ ಸಿಕ್ಕಂತಾಗಿದೆ. ರಾಜೀವ್ ಸೂರಿ ಮಣಿಪಾಲ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿ)ಯ 1989ರ ಎಲೆಕ್ಟ್ರಾನಿಕ್ಸ್ ಪದವೀಧರ. ಕೆಲವು ತಿಂಗಳ ಹಿಂದೆ ಮೈಕ್ರೊಸಾಫ್ಟ್ ಸಿಇಒ ಆಗಿ ಹೈದರಾಬಾದ್ ಮೂಲದ ಸತ್ಯ ನಾಡೆಲ್ಲಾ ಅಧಿಕಾರ ವಹಿಸಿಕೊಂಡಾಗಲೂ ಕನ್ನಡಿಗರು ಖುಷಿಯಾಗಿದ್ದರು. ಏಕೆಂದರೆ ಆತನೂ ಎಂಐಟಿ ವಿದ್ಯಾರ್ಥಿಯೇ. ಹೀಗೆ ಜಗದ್ವಿಖ್ಯಾತ ಕಂಪೆನಿಗಳೆಲ್ಲ ಕರ್ನಾಟಕದ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಗುರುತಿಸಿ ಮುಖ್ಯಸ್ಥರ ಹುದ್ದೆಯನ್ನು ನೀಡುತ್ತಿರುವುದು ಕರ್ನಾಟಕ ಶಿಕ್ಷಣದಲ್ಲಿ ಎಷ್ಟು ಮುಂಚೂಣಿಯಲ್ಲಿದೆ ಎನ್ನುವುದನ್ನು ತೋರುತ್ತದೆ.



ರಾಜೀವ್ ಸೂರಿಗೆ ಇನ್ನೂ 46ರ ಹರೆಯ. ಹುಟ್ಟಿದ್ದು ಭಾರತದಲ್ಲಿ, ಬೆಳೆದದ್ದು ಕುವೈತ್‌ನಲ್ಲಿ. ಈಗ ಸಿಂಗಾಪುರದ ಪ್ರಜೆ. ಪತ್ನಿ ನೀನಾ ಮತ್ತು ಇಬ್ಬರು ಮಕ್ಕಳ ಜತೆ ವಾಸಿಸುತ್ತಿರುವುದು ಹೆಲ್ಸಿಂಕಿಯಲ್ಲಿ. ಸದ್ಯಕ್ಕೆ ಈತ ಲಕ್ಷಾಂತರ ಐಟಿ ಪದವೀಧರರಿಗೆ ರೋಲ್ ಮಾಡೆಲ್. ನೋಕಿಯಾದ ಸೊಲ್ಯೂಷನ್ಸ್ ಮತ್ತು ನೆಟ್‌ವರ್ಕ್ ವಿಭಾಗದ ಮುಖ್ಯಸ್ಥನಾಗಿ ಕಳೆದ ಕೆಲವು ವರ್ಷಗಳಿಂದ ಅತ್ಯುತ್ತಮ ಸಾಧನೆ ತೋರಿರುವ ರಾಜೀವ್ ಸೂರಿ, ಸಿಇಒ ಆಗುವುದು ನಿರೀಕ್ಷಿತವೇ ಇತ್ತು. ಧಾಡಸೀ ನಿರ್ಧಾರಗಳನ್ನು ಕೈಗೊಳ್ಳಬಲ್ಲ ನಾಯಕನೊಬ್ಬನ ಅಗತ್ಯ ಕಂಪೆನಿಗೆ ಇತ್ತು. ಏಕೆಂದರೆ ಕಳೆದ 4–5 ವರ್ಷಗಳಿಂದ ನೋಕಿಯಾ ಕಷ್ಟದ ದಿನಗಳನ್ನು ಎದುರಿಸುತ್ತಿದೆ. ಮುಖ್ಯವಾಗಿ ಮೊಬೈಲ್ ಸೆಟ್‌ಗಳ ಮಾರಾಟದಲ್ಲಿ ಅದು ಸ್ಥಾಪಿಸಿದ್ದ ಏಕಚಕ್ರಾಧಿಪತ್ಯಕ್ಕೆ ಸ್ಯಾಮ್‌ಸಂಗ್ ದೊಡ್ಡ ಹೊಡೆತ ಕೊಟ್ಟ ಬಳಿಕ ನೋಕಿಯಾ ತತ್ತರಿಸಿದೆ. 2007ರಲ್ಲಿ 28 ಯೂರೋ ಇದ್ದ ಅದರ ಷೇರುಬೆಲೆ 2012ರಲ್ಲಿ 1.33 ಯೂರೋಗೆ ಕುಸಿದದ್ದೇ ಅದರ ಸಂಕಷ್ಟಗಳಿಗೆ ಸಾಕ್ಷಿ. ಆದರೆ ಸಾಕಷ್ಟು 'ಕ್ಯಾಶ್ ಬ್ಯಾಲನ್ಸ್' ಇಟ್ಟುಕೊಂಡಿರುವ ಕಂಪೆನಿಯು ಮಾರುಕಟ್ಟೆಯಲ್ಲಿ ಮರಳಿ ಅಧಿಪತ್ಯ ಸ್ಥಾಪಿಸಲು ಹಲವು ತಂತ್ರಗಳನ್ನು ರೂಪಿಸಿದೆ. ಮೊನ್ನೆಯಷ್ಟೇ ತನ್ನ ಮೊಬೈಲ್ ಹ್ಯಾಂಡ್‌ಸೆಟ್ ಬಿಸಿನೆಸ್‌ಅನ್ನು ಮೈಕ್ರೊಸಾಫ್ಟ್ ಕಂಪೆನಿಗೆ 7.8 ಶತಕೋಟಿ ಡಾಲರ್‌ಗೆ ಮಾರಾಟ ಮಾಡಿರುವ ನೋಕಿಯಾ, ಈಗ ಸೊಲ್ಯೂಷನ್ಸ್ ಮತ್ತು ನೆಟ್‌ವರ್ಕ್ ವಿಭಾಗವನ್ನು ಬಲಪಡಿಸುತ್ತಿದೆ. ಈ ಮಾರಾಟದ ಬಳಿಕ ನೋಕಿಯಾದ ಷೇರು ಬೆಲೆ ಒಮ್ಮೆಲೆ 5.51 ಯೂರೋಗೆ ಜಿಗಿದಿತ್ತು. ಜತೆಗೆ ತಂತ್ರಜ್ಞಾನಕ್ಕೆ ಸಂಬಂಧಿಸಿದ ಲೈಸೆನ್ಸ್‌ಗಳ ಮಾರಾಟದ ಮೂಲಕ ಹಣ ಮಾಡಲು ಯೋಜನೆ ರೂಪಿಸಿದೆ.

ಕಂಪೆನಿಯ ಒಳಗಿನವರಾಗಿ ರಾಜೀವ್ ಸೂರಿಗೆ ಈ ಎಲ್ಲ ಸಂಕಷ್ಟಗಳ ಅರಿವು ಚೆನ್ನಾಗಿದೆ. ಬೇರೆ ಸಣ್ಣ ಕಂಪೆನಿಗಳನ್ನು ಖರೀದಿಸುವ ಐಡಿಯಾ ಸೂರಿಗೆ ಇದ್ದಂತಿದೆ. ಮುಖ್ಯವಾಗಿ ಅಲ್ಕಾಟೆಲ್ ಲೂಸೆಂಟ್‌ಅನ್ನು ನೋಕಿಯಾ ಖರೀದಿಸುವ ಸುದ್ದಿ ಇದೆ. ಈ ಮಧ್ಯೆ ಮಾರುಕಟ್ಟೆಯಲ್ಲಿ ಎರಿಕ್‌ಸನ್ ಮತ್ತು ಹುವಾವೀ ಕಂಪೆನಿಗಳ ಪೈಪೋಟಿಯನ್ನು ಎದುರಿಸಬೇಕಿದ್ದರೆ ಹೊಸ ಸಂಶೋಧನೆ ಮತ್ತು ಅಭಿವೃದ್ಧಿಗೂ ಸಾಕಷ್ಟು ಹಣ ಸುರಿಯಬೇಕಾಗುತ್ತದೆ. ಎಂಬಿಎ ಅಥವಾ ಯಾವುದೇ ಸ್ನಾತಕೋತ್ತರ ಪದವಿ ಇಲ್ಲದೆ ಅತ್ಯಂತ ದೊಡ್ಡ ಕಂಪೆನಿಯ ಮುಖ್ಯಸ್ಥನ ಹುದ್ದೆಗೆ ಏರಿರುವುದು ಈತನ ಹೆಗ್ಗಳಿಕೆಯೇ. ಬಿಡುವಿನ ವೇಳೆಯಲ್ಲಿ ಸದಾ ಜಿಮ್‌ನಲ್ಲಿರುವ ಸೂರಿ, ಸಂಗೀತಪ್ರಿಯ ಕೂಡಾ. ಈತನ ತಾಳಕ್ಕೆ ತಕ್ಕಂತೆ ಕಂಪೆನಿಯ ಲಾಭ ಹೆಜ್ಜೆ ಹಾಕುತ್ತದೋ ಎನ್ನುವುದನ್ನು ಕಾದುನೋಡಬೇಕು.



## ಸುಸೇನ್ ಘಟಸ್ಫೋಟ

ಗಂಡ–ಹೆಂಡಿರ ಜಗಳ ಉಂಡು ಮಲಗುವವರೆಗೆ ಎನ್ನುವ ಗಾದೆಗೆ ವಯಸ್ಸಾಗಿದೆ. ಬಾಲಿವುಡ್‌ನಲ್ಲಿ ಹೃತಿಕ್ ರೋಶನ್ ಮತ್ತು ಸುಸೇನ್ ಖಾನ್ ನಡುವಣ ದಾಂಪತ್ಯ ಮುರಿದು ಬಿದ್ದದ್ದನ್ನು ನೋಡಿದರೆ ಈ ಗಾದೆ ಮಾತು ರಿಟೈರ್ಡ್ ಆದಂತೆಯೇ. ಏಕೆಂದರೆ ಬಾಲಿವುಡ್‌ನಲ್ಲಿ ಸಾರಾಸಗಟಾಗಿ ಎಲ್ಲರೂ ಬಾಯ್ತುಂಬ ಹೊಗಳುತ್ತಿದ್ದ ದಾಂಪತ್ಯ ಇವರದ್ದಾಗಿತ್ತು. ಥಳುಕು ಬಳುಕಿನ ಬಾಲಿ–ವುಡ್‌ನಲ್ಲಿ ತಾರಾ ವರ್ಚಸ್ಸಿನ ಗಂಡನನ್ನು ಸಂಭಾಳಿಸು–ವುದು ಕಷ್ಟವೇ. ಆದರೆ ಸುಸೇನ್ ಕೂಡಾ ಸಿನಿಮಾ ಕುಟುಂಬದಿಂದಲೇ ಬಂದದ್ದರಿಂದ ಆಕೆಗೆ ಇದೇನೂ ಕಷ್ಟವಲ್ಲ ಎಂದೇ ಭಾವಿಸಲಾಗಿತ್ತು. ಈಗ ನೋಡಿದರೆ ಎಲ್ಲರ ಅನಿಸಿಕೆ ಉಲ್ಟಾಪಲ್ಟಾ ಆಗಿದೆ. ಅಧಿಕೃತವಾಗಿ ಇಬ್ಬರೂ ಕೋರ್ಟಿನಲ್ಲಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಆರು ತಿಂಗಳ ಬಳಿಕ ನ್ಯಾಯಾಧೀಶರು ಇಬ್ಬರನ್ನೂ ಕರೆದು ಅಭಿಪ್ರಾಯ ಕೇಳಬೇಕು. ಆಗಲೂ ಇಬ್ಬರೂ ತಮ್ಮ ನಿಲುವಿಗೆ ಅಂಟಿಕೊಂಡರೆ ಡೈವೋರ್ಸ್ ಖಚಿತ.

ತಪ್ಪು ಯಾರದು ಎನ್ನುವ ಬಗ್ಗೆ ಈಗ ಬಿಸಿಬಿಸಿ ಚರ್ಚೆ. ಆರು ತಿಂಗಳ ಹಿಂದೆಯೇ ಈ ಡೈವೋರ್ಸಿನ ಸೂಚನೆ ಸಿಕ್ಕಿದ್ದಾಗ ಇದೆಲ್ಲಾ ಪಬ್ಲಿಸಿಟಿ ಸ್ಟಂಟ್ ಎಂದು ಪತ್ರಿಕೆಗಳು ಷರಾ ಬರೆದಿದ್ದವು. 'ಕೈಟ್ಸ್' ಚಿತ್ರದಲ್ಲಿ ನಟಿಸಲು ಬಂದ ವಿದೇಶಿ ನಟಿ ಬಾರ್ಬರಾ ಮೋರಿ, ಹೃತಿಕ್‌ನ ಹೃದಯಕ್ಕೆ ಲಗ್ಗೆ ಇಟ್ಟಿದ್ದಳು. ಆ ಬಳಿಕ ಹೃತಿಕ್ ಮನೆಯಲ್ಲಿ ಸುಸೇನ್ ಜತೆಗೆ ಅತ್ತೆ– ಮಾವನ ಸಂಬಂಧ ಚೆನ್ನಾಗಿಲ್ಲ ಎನ್ನ–ಲಾಯಿತು. ಕೊನೆಗೊಂದು ದಿನ ಬೆಳಿಗ್ಗೆ ಸುಸೇನ್ ಮೂವರು ಮಕ್ಕಳ ಜತೆ ಗಂಟುಮೂಟೆ ಕಟ್ಟಿಕೊಂಡು ಮಾವ ರಾಕೇಶ್ ರೋಶನ್ ಕೋಣೆಗೆ ಬಂದು, 'ನಾನು ಮನೆ ಬಿಟ್ಟು ಹೋಗುತ್ತಿದ್ದೇನೆ' ಎಂದು ಘೋಷಿಸಿದಳು!

ಸುಸೇನ್ ಅಪ್ಪ ಸಂಜಯ್ ಖಾನ್ ಕೂಡಾ ಈ ಘಟ–ಸ್ಫೋಟದ ಬಗ್ಗೆ ಮಾತನಾಡುತ್ತಿಲ್ಲ. 'ಡೈವೋರ್ಸಿಗೆ ಕಾರಣ ಇಲ್ಲ. ಆದರೆ ಪರಿಸ್ಥಿತಿ ಹಾಗಿದೆ' ಎಂದು ಸುಸೇನ್ ನಗು–ನಗುತ್ತಲೇ ನುಡಿದಿದ್ದಾಳೆ. ಸದ್ಯಕ್ಕೆ ಮುಂಬೈಯಲ್ಲಿ ಸುಸೇನ್ ಪ್ರತ್ಯೇಕ ಮನೆ ಮಾಡಿದ್ದಾಳೆ. ಡೈವೋರ್ಸ್‌ಗೆ ಮನಸ್ಸು ಮಾಡದಂತೆ ಕೊನೆಯ ಕ್ಷಣದವರೆಗೂ ಪತ್ನಿಯ ಮನ ಒಲಿಸಲು ಯತ್ನಿಸಿದ ಹೃತಿಕ್, ಈಗ ನಿಜಕ್ಕೂ ಏಕಾಂಗಿ. ●

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65